


# ಮೃಗತೃಷ್ಣೆ

THE MIRAGE

■ ಕೇಶವರೆಡ್ಡಿ ಹಂದ್ರಾಳ
ಕಲೆ: ಮನೋಹರ ಆಚಾರ್ಯ

## ಮಳೆನೀರು, ಕಣ್ಣೀರಿನ ಪ್ರವಾಹದಲ್ಲಿ ಕನಸುಗಳ ಹರಿವು

ಬಾಗಿಲು ತಳ್ಳಿಕೊಂಡು ಭಗವಾನ್ ಕುಟ್ಟಿ ಬಂದಿದ್ದ. ಸಣ್ಣ ತಟ್ಟೆಯಲ್ಲಿ ಐದಾರು ತಾಜಾ ಏಲಕ್ಕಿ ಬಾಳೆಹಣ್ಣು. ಚಿಕ್ಕ ಬಟ್ಟಲಿನಲ್ಲಿ ಸ್ವಲ್ಪವೇ ಸ್ವಲ್ಪ ಜೇನು ತುಪ್ಪ. ಬಾಳೆಹಣ್ಣನ್ನು ಜೇನುತುಪ್ಪದಲ್ಲಿ ಅದ್ದಿಕೊಂಡು ತಿನ್ನುವುದು ಇಲ್ಲಿನ ರೂಢಿ, ಪದ್ಧತಿ. ನಾನು ಬಂದಾಗಿನಿಂದ ತಿಂಡಿ ಊಟಗಳಾದ ಮೇಲೆ ಐದಾರು ಬಾರಿಯಾದರೂ ಈ ರೀತಿಯಾಗಿ ಬಾಳೆಹಣ್ಣು ತಿಂದಿರಬೇಕು. ಪಟ್ಟಣಗಳಿರಲಿ, ಹಳ್ಳಿಗಳಿರಲಿ ಇಲ್ಲಿ ಸಾಮಾನ್ಯವಾಗಿ ಬಹುತೇಕರು ಎರಡು ಮೂರು ಬಾಳೆಗಿಡಗಳನ್ನು ನೆಟ್ಟಿರುತ್ತಾರೆ. ಹಾಗಾಗಿ ಫ್ರೆಶ್ ಬಾಳೆಹಣ್ಣನ್ನು ವರ್ಷದ ಕೆಲವು ದಿನಗಳಲ್ಲಾದರೂ ಸವಿಯುತ್ತಾರೆ. ಭಗವಾನ್ ಕುಟ್ಟಿ ಹಿಡಿದಿದ್ದ ತಟ್ಟೆಯಿಂದ ಎರಡು ಬಾಳೆಹಣ್ಣು ಸುಲಿದು ಜೇನುತುಪ್ಪದಲ್ಲಿ ಅದ್ದಿ ತಿಂದಿದ್ದೆ.

'ಜನರೇಟರ್ ಸ್ಟಾರ್ಟ್ ಮಾಡಿದ್ದಾರೆ. ಮೂರು ದಿನ ಕರೆಂಟ್ ಕೈಕೊಟ್ಟರೂ ಲೈಟು, ಫ್ಯಾನ್, ಟೀವಿಗಳಿಗೆ ತೊಂದರೆಯಿಲ್ಲ. ಹಜಾರದ ದೊಡ್ಡ ಟೀವಿಯಲ್ಲಿ ಪ್ರವಾಹದ ಸುದ್ದಿಗಳು ಪ್ರಸಾರವಾಗುತ್ತಿವೆ. ನಯ್ಯಾರ್ ತಿಂಡಿ ತಿಂದು ಆಗಲೇ ಟೀವಿ ಮುಂದೆ ಕುಳಿತಿದ್ದಾರೆ. ಪಕ್ಕದಲ್ಲಿ ವುಡನ್ ಚೇರ್ ಹಾಕಿಸಿದ್ದೇನೆ, ನೀವೂ ಬಂದು ಕೂರಬಹುದು' ಎಂದಿದ್ದ. ಆ ಕ್ಷಣ ಡಾಕ್ಟರ್ ಅರುಂಧತಿ ಪಿಳ್ಳೈ ಮತ್ತು ಡಾಕ್ಟರ್ ಆಶಾ ಬೆಂಗತಮಲೆ ಎಂಬ ಎರಡು ಹೆಣ್ಣು ದೇಹಗಳು ಕಣ್ಮುಂದೆ ಸುಳಿದು ಮಾಯವಾಗಿದ್ದವು. ನಾನು ಎದ್ದು ಹಜಾರಕ್ಕೆ ಬಂದು ಕೆ.ಎಮ್. ನಯ್ಯಾರರ ಪಕ್ಕದ ಚೇರಿನಲ್ಲಿ ಕುಳಿತುಕೊಂಡೆ. ನಯ್ಯಾರ್ ನನ್ನ ಕಡೆಗೊಮ್ಮೆ ನೋಡಿ ಸಣ್ಣದಾಗಿ ನಕ್ಕು ಟಿವಿ ಪರದೆಯ ಮೇಲೆ ಕಣ್ಣು ನೆಟ್ಟಿದ್ದರು. ನನ್ನ ಕಣ್ಣುಗಳೂ ಪರದೆಯ ಮೇಲಿನ ದೃಶ್ಯಗಳನ್ನು ಸೆರೆಯಿಡಲಾರಂಭಿಸಿದವು. ಟೀವಿ ಪರದೆಯನ್ನು ಸೀಳಿಕೊಂಡು ಹೊರಬಂದಂತೆ ಜಲಪ್ರಳಯದ ದೃಶ್ಯಗಳು ಬಿತ್ತರಗೊಳ್ಳುತ್ತಿದ್ದವು. ಪೂರ್ವ ಕೇರಳದ ನಾಲ್ಕು ಜಿಲ್ಲೆಗಳಲ್ಲಿ ಪ್ರವಾಹ ತೀವ್ರವಾಗಿತ್ತು. ಬಹುತೇಕ ರಸ್ತೆಗಳು ನೀರಿನಿಂದ ಆವೃತಗೊಂಡಿದ್ದು ಮಳೆಯ ಮತ್ತು ಹರಿವ ನೀರಿನ ರಭಸಕ್ಕೆ ಮನೆ, ಜನ, ಜಮೀನು, ಜಾನುವಾರುಗಳು ಕೊಚ್ಚಿಹೋಗುತ್ತಿದ್ದವು. ಕೆಲವು ಮನೆಗಳ ಮೇಲ್ಛಾವಣಿಗಳ ಮೇಲೆ ನಿಂತು ಜನ ರಕ್ಷಣೆಗಾಗಿ ಚೀರಾಡುತ್ತಿದ್ದರು.

ಎರ್ನಾಕುಲಂ, ಕೊಚ್ಚಿನ್, ಕಾಡುನಗಲೂರು, ತೊಟ್ಟ ಕತ್ತುಕರ, ದೇಸೋಮ್, ವಿಲಿಯತ್ತುನಾಡ್, ಮಂಜಾಲಿ ಮುಂತಾದ ಊರುಗಳ ತಗ್ಗು ಪ್ರದೇಶಗಳು ನೀರಿನಿಂದ ಸಂಪೂರ್ಣವಾಗಿ ಮುಳುಗಿಹೋಗಿದ್ದವು. ಚೆರತೋಣಿ, ನಿಡುಕ್ಕಿ ಡ್ಯಾಂಗಳಿಂದ ಬಿಡುಗಡೆ ಮಾಡಿದ ನೀರಿನಿಂದಾಗಿ ಪ್ರವಾಹ ಇಮ್ಮಡಿಯಾಗಿತ್ತು. ಪೊಲೀಸರು, ನೌಕಾದಳ, ವಿಪತ್ತು ನಿರ್ವಹಣಾ ಸಂಸ್ಥೆ, ಕಡಲು ಕಾವಲು ಸೇನೆ, ಸ್ಥಳೀಯ ಜನಪ್ರತಿನಿಧಿಗಳು, ಸ್ವಯಂ ಸೇವಾ ಸಂಘಟನೆಗಳು ಪರಿಹಾರ ಕಾರ್ಯಗಳಲ್ಲಿ ತೊಡಗಿದ್ದವು. ಸಾರಿಗೆ ಮತ್ತು ವಿದ್ಯುತ್ ಸಂಪರ್ಕಗಳು ಕಡಿತಗೊಂಡಿದ್ದವು. ಎಲ್ಲಾ ಟೀವಿ ಚಾನಲ್‌ಗಳು ಪ್ರವಾಹ ಪರಿಸ್ಥಿತಿಯನ್ನು ನಿರಂತರವಾಗಿ ಕವರ್ ಮಾಡುತ್ತಿದ್ದವು. ನಾವು ಕುಳಿತಿದ್ದಲ್ಲಿಗೆ ಖ್ಯಾತ ಟೀವಿ ಚಾನಲ್‌ನವರು ಬಂದಿದ್ದರು ಪ್ರವಾಹದ ಬಗ್ಗೆ ಕೆ.ಎಮ್. ನಯ್ಯಾರರ ಅಭಿಪ್ರಾಯ ಪಡೆಯಲು. ಟೀವಿಯ ಲೈವ್‌ನಲ್ಲಿ ಕೆ.ಎಮ್. ನಯ್ಯಾರ್ ಜೊತೆ ಪರದೆಯ ಮೇಲೆ ನಾನೂ ಕಾಣುತ್ತಿದ್ದೆ. ಕ್ಯಾಮೆರಾದ ಲೆನ್ಸ್‌ಗಳನ್ನು ತಮ್ಮ ಕಣ್ಣುಗಳಲ್ಲಿ ತೀಕ್ಷ್ಣವಾಗಿ ತುಂಬಿಕೊಂಡ ಕೆ.ಎಮ್. ನಯ್ಯಾರ್, 'ದೇವರು ಮುನಿಸಿಕೊಂಡಾಗ ಮನುಷ್ಯ ಏನೂ ಮಾಡಲಾಗದೆ ಅಸಹಾಯಕನಾಗಿಬಿಡುತ್ತಾನೆ. ಆದರೆ ಸಕಲ ಜೀವರಾಶಿಗಳನ್ನೂ ಪೋಷಿಸುವ ದೇವರು ಕೂಡ ಒಮ್ಮೊಮ್ಮೆ ಇಷ್ಟು ನಿರ್ದಯಿ ಏಕೆ ಆಗುತ್ತಾನೆಂಬುದೇ ಉತ್ತರವಿಲ್ಲದ ಪ್ರಶ್ನೆ. ಹೋದ ವರ್ಷ ಕೂಡಾ ಇಂಥದ್ದೇ ಜಲಪ್ರಳಯವಾಗಿ ನೂರಾರು ಜನ, ಜಾನುವಾರು ಪ್ರಾಣ ಕಳೆದುಕೊಂಡದ್ದಲ್ಲದೆ ಲಕ್ಷಾಂತರ ಜನರ ಬದುಕು ಮೂರಾಬಟ್ಟೆಯಾಯಿತು. ಇಂದು ಮತ್ತೆ ಅಂಥದ್ದೇ ಜಲಪ್ರಳಯ ಮರುಕಳಿಸಿದೆ. ಕಷ್ಟದಲ್ಲಿ ಇರುವವರಿಗೆ ಎಲ್ಲರೂ ನೆರವಾಗಬೇಕಾಗಿದೆ.